

ಡಾ.ವಿನೋದ ಛೆಬ್ಬಿ

‘ಅಮ್ಮನ ಮಗ’ ಎನಿಸಿಕೊಳ್ಳುವವರು ಸಂಗಾತಿಯ ಜೊತೆಗೆ ಆರೋಗ್ಯಕರ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳಲು ಹಿಂದೆಗೆಯುತ್ತಾರೆ.

# 240:ಅನ್ಯೋನ್ಯತೆಗೆ ಹುಡುಕಾಟ-19

ಅನ್ಯೋನ್ಯತೆಗೆ ಗೋಡೆ ಹಾಕಿಕೊಳ್ಳುವ ಗೋಡಿಗರ ಬಗೆಗೆ ತಿಳಿದುಕೊಳ್ಳುತ್ತ, ಅವರು ಬಾಂಧವ್ಯಕ್ಕೆ ಸ್ಪಂದಿಸುವ ಬಗೆಯನ್ನು ಅರಿತೆವು. ಬಾಂಧವ್ಯದ ಕರೆಗೆ ಬೆನ್ನು ತಿರುಗಿಸುವುದು ಗೋಡಿಗರಲ್ಲದೆ ಇನ್ನೊಂದು ವಿಧದ ಗಂಡಸರಲ್ಲಿ ಕಂಡುಬರುತ್ತದೆ. ಅವರ ಬಗೆಗೆ ತಿಳಿಯಲಿಕ್ಕಾಗಿ ಈ ದೃಷ್ಟಾಂತ: ಈ ತಾಯಿಗೊಬ್ಬ ಮಗನಿದ್ದಾನೆ. ಅವನಿಗೆ ಕಿಶೋರ ಎಂದು ಹೆಸರಿಸೋಣ. ಕಿಶೋರನ ಬಾಲ್ಯದಿಂದಲೂ ಎಲ್ಲ ನಿರ್ಧಾರಗಳನ್ನು ತಾಯಿಯೇ ಕೈಗೊಂಡಿದ್ದಾಳೆ, ಹಾಗೂ ಅವನು ಅನುಸರಿಸುತ್ತ ಬಂದಿದ್ದಾನೆ.

ತಾರುಣ್ಯಕ್ಕೆ ಬಂದಮೇಲೆ ಅಮ್ಮ ಆರಿಸಿದ ಹೆಣ್ಣನ್ನು ಮದುವೆ ಆಗಿದ್ದಾನೆ. ಹೊಸದಾಗಿ ಕಾಲಿಟ್ಟವಳಿಗೆ ಗಂಡನು ತಾಯಿಯನ್ನು ಮಗುವಾಗಿ ತಬ್ಬಿಕೊಳ್ಳುವುದು, ಆಕೆಯೊಡನೆ ತಮ್ಮ ಹಾಸಿಗೆಯಲ್ಲಿ ಒರಗಿ ಹರಟೆ ಹೊಡೆಯುವುದು ಮುಂತಾದ ನಡವಳಿಕೆ ವಿಚಿತ್ರವಾಗಿ ಕಂಡಿದೆ. ಕೌತುಕದ ಸಂಗತಿ ಎಂದರೆ, ಕಿಶೋರನಿಗೆ ತಾಯಿಯೊಡನೆ ಬೆರೆಯುವಾಗ ಇರುವ ಹುಮ್ಮಸ್ಸು ಹೆಂಡತಿಯೊಡನೆ ಇಲ್ಲ. ಹೆಂಡತಿಯ ಜೊತೆಗಿನ ಸಂಭಾಷಣೆಯಲ್ಲೂ ತಾಯಿಯೇ ತುಂಬಿರುತ್ತಾಳೆ. ವರ್ಷವಾದರೂ ಮೊದಲ ಸಂಭೋಗ ಕಂಡಿಲ್ಲದ ದಂಪತಿಯನ್ನು ನನ್ನಲ್ಲಿ ಕರೆತಂದಿದ್ದು ತಾಯಿಯೆ. ಕಿಶೋರನ ಒಳಮನಸ್ಸನ್ನು ಹೊಕ್ಕು ನೋಡಿದಾಗ ವಿಚಿತ್ರವಾದ ಯೋಚನಾ ಲಹರಿ ಕಂಡುಬಂತು: ಹೆಂಡತಿಯ ಹತ್ತಿರವಾಗಬೇಕಾದರೆ ತಾಯಿಯಿಂದ ದೂರವಾಗಬೇಕು; ಆದರೆ ಇದು ಅವನ ಮನಸ್ಸಿಗೆ ಒಪ್ಪುವುದಿಲ್ಲ. ಯಾಕೆಂದರೆ ತಾಯಿಯೊಡನೆ ಭಾವನಾತ್ಮಕವಾಗಿ ಬೆಸೆದುಕೊಂಡಿದ್ದಾನೆ – ಹಗ್ಗದಲ್ಲಿ ದಾರವು ಹೊಸೆದುಕೊಂಡಂತೆ! ಇಲ್ಲೇನು ನಡೆದಿದೆ?

ಯಾವುದೇ ಆರೋಗ್ಯಕರ ಸಂಬಂಧದಲ್ಲಿ ತಾಯಿಯು ಮಗನಿಗೆ ಪ್ರೀತಿಯನ್ನು ಧಾರೆಯೆರೆಯುತ್ತಾಳೆ; ಹಾಗೂ ತನ್ನ ಪ್ರೀತಿಯ ಅಗತ್ಯಗಳನ್ನು ಇನ್ನೊಂದು ಕಡೆಯಿಂದ (ಉದಾ. ಗಂಡ, ಸ್ನೇಹಿತ/ತೆ) ಪೂರೈಸಿಕೊಳ್ಳುತ್ತಾಳೆ. ಇದಕ್ಕೆ ವ್ಯತಿರಿಕ್ತವಾಗಿ, ಅದನ್ನು ಮಗನಲ್ಲಿ ಹುಡುಕಿಕೊಂಡರೆ? (ಕಂತು 233ರಲ್ಲಿ ತಾಯಿಯು ಮಗುವಿಗೆ ಅನ್ನ ಉಣಿಸುವ ಉದಾಹರಣೆಯನ್ನು ನೆನಪಿಸಿಕೊಳ್ಳಿ.) ಇಂಥ ಪ್ರಸಂಗದಲ್ಲಿ ತಾಯಿಯನ್ನು ಖುಷಿಪಡಿಸುವುದು ತನ್ನ ಕರ್ತವ್ಯ ಎಂದು ಮಗ ತನಗೆ ಅರಿಯದಂತೆ ಭಾವನಿರ್ಧಾರ ಕೈಗೊಳ್ಳುತ್ತಾನೆ. ಬೆಳೆಯುತ್ತ ದೊಡ್ಡವನಾಗುತ್ತ ತಾಯಿಯ ಆತಂಕವನ್ನು ತನ್ನಮೇಲೆ ಹೇರಿಕೊಳ್ಳುತ್ತ, ಆಕೆಯ ಭಾವನೆಗಳನ್ನು ತಾನು ಅನುಭವಿಸುತ್ತ (ಇದಕ್ಕೆ ಇಂಗ್ಲೀಷಿನಲ್ಲಿ **identification** ಎನ್ನುತ್ತಾರೆ), ಆಕೆಯನ್ನು ಕಾಪಾಡುವ ಪರಮ ಜವಾಬ್ದಾರಿಯಲ್ಲಿ ತನ್ನ ಸಾಮರ್ಥ್ಯವನ್ನು ವಿನಿಯೋಗಿಸುತ್ತಾನೆ. ಪರಿಣಾಮವಾಗಿ, ಸ್ವಂತದ ಬಳಕೆಗೆ ಬೇಕಾಗುವಷ್ಟು ಮನೋಭಾವುಕ ಸಾಮರ್ಥ್ಯ ಅವನಲ್ಲಿ ಉಳಿಯುವುದಿಲ್ಲ.

ಸೀಮಾರೇಖೆಯ ಭಾಷೆಯಲ್ಲಿ ಹೇಳುವುದಾರೆ, ಅವನಿಗೂ ತಾಯಿಗೂ ನಡುವಿನ ಸೀಮಾರೇಖೆಯು ಇಲ್ಲವೇ ಇಲ್ಲವೆನ್ನುವ ಮಟ್ಟಿಗೆ ಅಸ್ಪಷ್ಟವಾಗಿದೆ. ಕಿಶೋರನು ತನ್ನ ಸುತ್ತ ಆರೋಗ್ಯಕರ ಸೀಮಾರೇಖೆಯನ್ನು ಹಾಕಿಕೊಳ್ಳಲು ತಾಯಿಯು ಅವಕಾಶ ಕೊಟ್ಟಿಲ್ಲ ಎನ್ನುವುದು ಎದ್ದುಕಾಣುತ್ತದೆ. ಇವನು ತನ್ನ ಪ್ರತ್ಯೇಕತೆಗೆ ಗೆರೆ ಎಳೆಯುವಾಗ ಆಕೆ ಲೆಕ್ಕಿಸದೆ ಒಳನುಗ್ಗಿ ಅವನ ಸ್ವಾಯತ್ತತೆಯ ಮೇಲೆ ದಾಳಿ ನಡೆಸಿ, ಎಲ್ಲದರ ಮೇಲೆ ತನ್ನ ಮುದ್ರೆಯೊತ್ತಿದಂತಿದೆ. ಉದಾಹರಣೆಗೆ, ಕಿಶೋರ ಈಜುಗಾರಿಕೆಯ ವಿಡಿಯೋಗಳನ್ನು ಸವಿಯುತ್ತಾನೆ. ಆದರೆ ಸ್ವತಃ ಈಜುವುದಕ್ಕೆ ಹೋಗುವುದಿಲ್ಲ, ಭಯವಾಗುತ್ತದೆ ಎನ್ನುತ್ತಾನೆ. ಭಯವಾಗುವುದನ್ನು ಸವಿಯಲು ಹೇಗೆ ಸಾಧ್ಯ ಎಂದು ಯೋಚಿಸಿದರೆ, ಭಯವು ತಾಯಿಯಿಂದ ಬಂದಿದ್ದು ಎಂದು ಗೊತ್ತಾಗುತ್ತದೆ. ಹೀಗೆ ತನ್ನದು ಎಂದೆನ್ನಿಸುವ ಎಲ್ಲದರ ಜೊತೆಗೆ ತಾಯಿಯದು ಕಲಬೆರಕೆ ಆಗಿರುವುದರಿಂದ ತನ್ನದು ಯಾವುದು, ತಾಯಿಯದು ಯಾವುದು ಎಂಬುದರ ನಡುವಿನ ಅಂತರವೇ ಮಾಯವಾಗಿದೆ. ಪರಿಣಾಮವಾಗಿ, ಇದು ತನ್ನದು ಮಾತ್ರ ಎಂದು ದೃಢವಾಗಿ ಹೇಳಿಕೊಳ್ಳಲು, ಅದರಿಂದ ತನ್ನನ್ನು ಗುರುತಿಸಿಕೊಳ್ಳಲು ಏನೂ ಉಳಿದಿಲ್ಲ. ಹಾಗಾಗಿ ಕಿಶೋರ ‘ಅಮ್ಮನ ಮಗ’ನಾಗಿಯೇ ಬೆಳೆಯುತ್ತಾನೆ. ಇಂಥ ಗಂಡಸರಲ್ಲಿ ಸ್ವಂತ ವ್ಯಕ್ತಿತ್ವವಾಗಲೀ ಲೈಂಗಿಕ ವ್ಯಕ್ತಿತ್ವವಾಗಲೀ ರೂಪುಗೊಳ್ಳಲಾರದು. ಕೆನ್ನೆತ್ ಆ್ಯಡಮ್ಸ್ ತನ್ನ ಪುಸ್ತಕಗಳಲ್ಲಿ (**When He's Married to Mom** ಹಾಗೂ **Silently Seduced: Kenneth Adams**) ತಾಯಿಮಗನ ಹೊಸೆತದ (**enmeshment**) ಬಗೆಗೆ ವಿಸ್ತಾರವಾಗಿ ಬರೆದಿದ್ದಾನೆ. ಈ ಸಂಬಂಧವು ಸೂಕ್ಷ್ಮ ಪ್ರಕಾರದ ‘ರಕ್ತಸಂಬಂಧದ ಕಾಮ’ ಎಂದು ಅನೇಕ ಮನೋವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಕಿಶೋರನ ವಿಷಯದಲ್ಲೂ ಹೀಗೆಯೇ ಆಗಿದೆ. (ನಂಬಲು ಆಗುತ್ತಿಲ್ಲವೆ? ತಾಯಿಯನ್ನು ತಬ್ಬಿಕೊಳ್ಳುವಾಗ ಇರುವ ಹುಮ್ಮಸ್ಸು ಹೆಂಡತಿಯ ಜೊತೆಗೇ ಯಾಕಿಲ್ಲ, ಹಾಗೂ, ಗಂಡಹೆಂಡತಿ ಮಲಗುವ ಹಾಸಿಗೆಯ ಮೇಲೆ ಮೈಚಾಚುವಾಗ ತಾಯಿಯ ಒಳಮನಸ್ಸಿನಲ್ಲಿ ಯಾವ ಭಾವ – ವಿಚಾರವಲ್ಲ – ಇರುತ್ತದೆ ಎಂದು ಪ್ರಶ್ನಿಸಿಕೊಂಡರೆ ಸ್ಪಷ್ಟವಾಗುತ್ತದೆ.)

ತಾಯಿಯ ಈ ಸೂಕ್ಷ್ಮದಾಳಿಯಿಂದ ಗಂಡಿನ ಪ್ರಬುದ್ಧ ಲೈಂಗಿಕ ಪರಿಕಲ್ಪನೆಗೆ ಬೀಳುವ ಏಟು ಅಷ್ಟಿಷ್ಟಲ್ಲ. ಗಂಡು ಸ್ವಂತ ಕಾಮುಕತೆಯನ್ನು ಅನ್ವೇಷಿಸಲು ಹೊರಡುವಾಗ ತಾಯಿಯಿಂದ ಪಡೆದ ಅನುಭೂತಿಯು ತಲೆಹಾಕುವುದರಿಂದ ಗೊಂದಲವಾಗಿ, ‘ತಾಯಿಯೂ ಬೇಡ, ಪ್ರೇಯಸಿಯೂ ಬೇಡ’ ಎಂದು ಭಾವ ನಿರ್ಧಾರ ಮಾಡಿ, ಸಂವಹನದ ಜಂಜಾಟವಿಲ್ಲದ ನೀಲಿ ಚಿತ್ರಗಳಿಗೆ ದಾಸನಾಗಬಹುದು. (ಯಾರ ಹಂಗಿಲ್ಲದೆ ಒಬ್ಬನೇ ಸುಖಿಸುವುದು ಎಷ್ಟು ಆರಾಮದಾಯಕ!) ಹೆಂಡತಿಯನ್ನು ಪ್ರೀತಿಸುತ್ತಿದ್ದರೂ ಕಾಮಾಸಕ್ತಿ ಹುಟ್ಟದಿರುವುದಕ್ಕೆ ಇದೂ ಒಂದು ಕಾರಣ. ಲೈಂಗಿಕ ವ್ಯಕ್ತಿತ್ವವು ಸರಿಯಾಗಿ ಬೆಳೆಯದ ಗಂಡಸರಿಗೆ ಪ್ರಬುದ್ಧ ಹೆಣ್ಣಿನೊಡನೆ ಸಂಬಂಧವನ್ನು ಕಟ್ಟಿಕೊಳ್ಳುವುದು ದೊಡ್ಡ ಸಮಸ್ಯೆ ಆಗುತ್ತದೆ. ಬದುಕಿನಲ್ಲಿ ‘ಇನ್ನೊಬ್ಬಳಿಗೆ’ ಜಾಗಕೊಡಲು ತಪ್ಪಿತಸ್ಥ ಭಾವ ಕಾಡುತ್ತದೆ. ನಿಷ್ಠೆಯನ್ನು ಇನ್ನೊಂದು ಹೆಣ್ಣಿಗೆ ಬದಲಿಸುವುದೆಂದರೆ ತಾಯಿಗೆ ದ್ರೋಹ ಬಗೆದಂತೆ ಎಂದು ಇವರು ಭಾವಿಸುತ್ತಾರೆ. ಇಲ್ಲೊಬ್ಬನು ಅತ್ತೆಸೊಸೆಯ ಹೊಂದಾಣಿಕೆಯ ಸಮಸ್ಯೆಯು ಬಗೆಹರಿಯದೆಂದು ಹೆಂಡತಿಯೊಡನೆ ಬೇರೆ ಮನೆಮಾಡಿದ. ಅದೇ ಕಾರಣಕ್ಕಾಗಿ ಹೆಂಡತಿಯ ಮೇಲೆ ಮುನಿಸಿಕೊಂಡು ರಾತ್ರಿ ತಾಯಿಯ ಮನೆಯಲ್ಲೇ ಕಳೆಯುತ್ತಾನೆ. ಕೇಳಿದರೆ, ‘ಬೇರೆ ಮನೆ ಬೇಕಿದ್ದುದು ನಿನಗೆ, ನನಗಲ್ಲ!’ ಎನ್ನುತ್ತಿದ್ದಾನೆ. ಇವರಿಗೆ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದರ ಬಗೆಗೆ ಸ್ಪಷ್ಟ ಕಲ್ಪನೆ ಇರುವುದಿಲ್ಲ. ಹಾಗಾಗಿ, ಭಾವನೆಗಳಲ್ಲಿ ತಾಯಿಯನ್ನು ಹೋಲುವ ಹೆಣ್ಣನ್ನೇ ಆರಿಸಿಕೊಳ್ಳುತ್ತಾರೆ. ಹಾಗಾಗಿ, ತನ್ನ ವೈಯಕ್ತಿಕತೆಗೆ ಜಾಗ ಬಿಡದಿರುವ, ತನ್ನನ್ನು ಆಳುವ ಹೆಣ್ಣಿಗೆ ಒಪ್ಪಿಸಿಕೊಂಡು ಒದ್ದಾಡುತ್ತಾರೆ. ದಾಂಪತ್ಯಕ್ಕೆ ಬದ್ಧರಾಗಲು ತಲೆತಪ್ಪಿಸಿಕೊಳ್ಳುವುದು, ಹೆಣ್ಣಿನ ಬಗೆಗೆ ಅನಿಶ್ಚಿತ ಧೋರಣೆ, ಸಂಗಾತಿಯೊಡನೆ ಭಾವವಿನಿಮಯದಲ್ಲಿ ಅಡಚಣೆ ಇತ್ಯಾದಿ ಇವರಲ್ಲಿ ಎದ್ದುಕಾಣುತ್ತವೆ (ಉದಾ. ಹೆಂಡತಿಯು ಅನಿರೀಕ್ಷಿತವಾಗಿ ತಬ್ಬಿಕೊಂಡಾಗ ಅನುಭವಿಸುವುದು ಬೇಕೋ ಬೇಡವೋ ಎಂದು ಕಿಶೋರ ಗೊಂದಲಕ್ಕೆ ಒಳಗಾಗುತ್ತಾನೆ) ಇವರು ಸಂಬಂಧದಲ್ಲಿ ಒಂದು ಮಟ್ಟಕ್ಕೆ ತಲುಪಿ, ಆನಂತರ ಮುಂದುವರಿಯಲು ನಿರ್ಧರಿಸಲಾಗದೆ ಅಲ್ಲೇ ನಿಂತುಬಿಡುತ್ತಾರೆ. ವರ್ಷಗಟ್ಟಲೆ ಹುಡುಗಿಯನ್ನು ಪ್ರೀತಿಸುತ್ತಿದ್ದರೂ ತಾಯಿ ಒಪ್ಪುತ್ತಿಲ್ಲ ಎನ್ನುವುದಕ್ಕೆ ಮದುವೆ ಬೇಡವೆನ್ನುವುದು ಇದಕ್ಕೊಂದು ನಿದರ್ಶನ.

ಅಮ್ಮನ ಮಗನಾದ ಇಂಥವರನ್ನು ಹೇಗೆ ನಿರ್ವಹಿಸುವುದು? ಸಮಸ್ಯೆ ಏನೆಂದರೆ, ಇವರು ತಾಯಿಗೆ ಅಂಟಿಕೊಂಡಿರುವುದು ಸಹಜಸೂಕ್ತ ಎಂದೇ ಅಂದುಕೊಂಡಿರುತ್ತಾರೆ. ಸಾಕಾಗದ್ದಕ್ಕೆ ಇಂಥ ಗಂಡುಮಕ್ಕಳನ್ನು ಸಮಾಜದ ಹಿರಿಯ ಹೆಂಗಸರು ಹೆಮ್ಮೆಯಿಂದಲೇ ಕಾಣುವುದಿದೆ. ಹಾಗಾಗಿ ಹೊಸ ದೃಷ್ಟಿಕೋನದಿಂದ ನೋಡದ ಹೊರತು, ಮಕ್ಕಳಾದರೂ ಇವರ ಸಂಗಾತಿಯ ಅನ್ಯೋನ್ಯತೆಯ ಬಯಕೆಯು ಗಗನ ಕುಸುಮವಾಗಿ ಉಳಿಯುತ್ತದೆ. ಆದಷ್ಟು ಬೇಗ ದಾಂಪತ್ಯ ಚಿಕಿತ್ಸೆ ಪಡೆಯುವುದೊಂದೇ ದಾರಿ!

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.